**ಇಂದು ದಿಃ 20.06.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**
**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ನಾನು ದಿನಾಂಕ 26.05.1992 ರಲ್ಲಿ ನಾನು ಶಿಕ್ಷಕಿಯಾಗಿ ನೇಮಕವಾಗಿದ್ದೇನೆ. ನನ್ನ ನೇಮಕಾತಿ ಪತ್ರಕ್ಕೆ ಗೋವಿಂದಯ್ಯನವರು ಸಹಿ ಮಾಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಗೋವಿಂದಯ್ಯನವರು ಮಿಳಿಂದಾ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆದ್ದರಿಂದ ಗೋವಿಂದಯ್ಯನವರೇ ಮೌಖಿಕ ಮತ್ತು ಲಿಖಿತ ಆದೇಶ ಮಾಡುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ಮತ್ತು ವಂತಿಕೆಯನ್ನು ಎಷ್ಟು ಸಂಗ್ರಹಿಸಬೇಕೆಂದು ಗೋವಿಂದಯ್ಯನವರೇ ಹೇಳುತ್ತಿದ್ದರು ಎಂದರೆ ಸರಿಯಲ್ಲ ಆದರೆ ದೊಡ್ಡಣ್ಣನವರು ಹೇಳುತ್ತಿದ್ದರು. ದೊಡ್ಡಣ್ಣನವರು ಶುಲ್ಕ ಮತ್ತು ವಂತಿಕೆಯನ್ನು ವಸೂಲು ಮಾಡುವಂತೆ ನಮಗೆ ಹೇಳಿದ ಬಗ್ಗೆ ದಾಖಲೆ ಇರುವುದಿಲ್ಲ. ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ವಂತಿಕೆ ಮತ್ತು ಶುಲ್ಕವನ್ನು ನನಗೆ ಕೊಡಬೇಕೆಂದು ದೊಡ್ಡಣ್ಣನವರು ಲಿಖಿತವಾಗಿ ಕೇಳಿಲ್ಲ. ಸಂಗ್ರಹಿಸಿದ ಹಣವನ್ನು ಆರೋಪಿಗೆ ನೀಡುವಂತೆ ವ್ಯವಸ್ಥಾಪಕ ಧರ್ಮದರ್ಶಿರವರಿಂದ ಆದೇಶವನ್ನು ನಮಗೆ ಮಾಡಿಸುವಂತೆ ನಾವು ದೊಡ್ಡಣ್ಣನವರನ್ನು ಕೇಳಿಲ್ಲ. ಆ ರೀತಿ ಆದೇಶ ಪಡೆದು ಹಣವನ್ನು ದೊಡ್ಡಣ್ಣನವರಿಗೆ ಕೊಡಲು ತೊಂದರೆ ಇರಲಿಲ್ಲ. ನನ್ನ ಸೇವಾವಧಿಯಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಣದಲ್ಲಿ ದೊಡ್ಡಣ್ಣನವರಿಗೆ ಎಷ್ಟು ಹಣ ಕೊಟ್ಟಿದ್ದೇವೆ ಎಂದು ತೋರಿಸಲು ಲೆಕ್ಕ ಪತ್ರ ಇರುವುದಿಲ್ಲ. ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕ ಮತ್ತು ವಂತಿಕೆ ಹಣವನ್ನು ದೊಡ್ಡಣ್ಣನವರಿಗೆ ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಿಳಿಂದ ವಿದ್ಯಾಸಂಸ್ಥೆಯ ಪೂರ್ತಿ ನಿಯಂತ್ರಣ ಗೋವಿಂದಯ್ಯನವರ ಕೈಯಲ್ಲಿತ್ತು ಎಂದರೆ ಸರಿ. ಮಿಳಿಂದ ವಿದ್ಯಾಸಂಸ್ಥೆಯಲ್ಲಿ 26 ವರ್ಷ ಸೇವೆ ಸಲ್ಲಿಸಲು ಗೋವಿಂದಯ್ಯನವರು ನನಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ ದೊಡ್ಡಣ್ಣನವರು ಮಾಡಿಕೊಟ್ಟಿದ್ದಾರೆ. ಮಿಳಿಂದ ವಿದ್ಯಾಸಂಸ್ಥೆಯಿಂದ ನಾನು 2018 ರಲ್ಲಿ ನಿವೃತ್ತಿಯಾಗಿದ್ದೇನೆ. 2010 ನೇ ಗೋವಿಂದಯ್ಯನವರನ್ನು ಮಿಳಿಂದ ವಿದ್ಯಾಸಂಸ್ಥೆಯಿಂದ ತೆಗೆದು ಹಾಕಲಾಗಿದೆ ಎಂದರೆ ಸರಿ. ಅಂದಿನಿಂದಲೂ ಮಿಳಿಂದ ವಿದ್ಯಾಸಂಸ್ಥೆಯ ನಿಯಂತ್ರಣ ಗೋವಿಂದಯ್ಯನವರ ಕೈಯಲ್ಲಿತ್ತು ಎಂದರೆ ಸರಿ. ವಿದ್ಯಾಸಂಸ್ಥೆಯಲ್ಲಿ 26 ವರ್ಷ ಸೇವೆ ಸಲ್ಲಿಸಲು ನನಗೆ ಅವಕಾಶ

ಮಾಡಿಕೊಟ್ಟಿದ್ದರಿಂದ ನನಗೆ ಅವರ ಬಗ್ಗೆ ವಿಧೇಯತೆ ಮತ್ತು ಗೌರವ ಇಲ್ಲ ಎಂದರೆ ಸರಿ. ಅವರ ಬಗ್ಗೆ ಗೌರವ ಇಲ್ಲ ಎಂದರೆ ಸರಿ. ಗೋವಿಂದಯ್ಯನವರು ನೀಡಿರುವ ಮಾಹಿತಿಯ ಮೇರೆಗೆ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ. ಶಾಲೆಗೆ ವ್ಯಾನ್ ಖರೀದಿಸಲು ವಿದ್ಯಾಸಂಸ್ಥೆಯಲ್ಲಿ ಠರಾವು ಮಾಡಿದ್ದರು ಎಂದರೆ ಸರಿ. ಪ್ರತಿಯೊಬ್ಬ ಶಿಕ್ಷಕರು ತಲಾ ಇಪ್ಪತ್ತೈದು ಸಾವಿರ ರೂಪಾಯಿ ವಂತಿಕೆ ಕೊಡಬೇಕೆಂದು ಠರಾವು ಮಾಡಲಾಗಿತ್ತು ಎಂದರೆ ಸರಿ. ಆ ರೀತಿ 7 ಜನ ಶಿಕ್ಷಕರು ಕೊಟ್ಟಿರುವ ಹಣವನ್ನು ಬ್ಯಾಂಕ್ ಆಫ್ ಮಹಾರಾಷ್ಟ್ರಕ್ಕೆ ಜಮೆ ಮಾಡಲಾಗಿದೆ ಎಂದರೆ ಸರಿ. ನನ್ನ ಕೈಗೆ ಹಣ ಕೊಡಬೇಕೆಂದು ದೊಡ್ಡಣ್ಣನವರು ನನಗೆ ಹೇಳಿರುವುದಿಲ್ಲ. ಅಥವಾ ಆ ಬಗ್ಗೆ ಲಿಖಿತವಾಗಿ ಏನು ಕೊಟ್ಟಿಲ್ಲ. ಮೌಖಿಕವಾಗಿ ಹೇಳಿದ್ದರು. ಠರಾವು ಅಂಗೀಕರಿಸಿದ ಪ್ರಕಾರ ನಾವು ಹಣವನ್ನು ಬ್ಯಾಂಕ್ ಗೆ ಜಮೆ ಮಾಡಬೇಕು ನಿಮ್ಮ ಕೈಗೆ ಕೊಡುವುದಿಲ್ಲವೆಂದು ದೊಡ್ಡಣ್ಣವರಿಗೆ ಹೇಳಿರುವುದಿಲ್ಲ. ದೊಡ್ಡಣ್ಣನವರ ಕೈಗೆ ನಾವು ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿಯವರ ಮುಂದೆ ನಾನು ಹೇಳಿಕೆ ಕೊಟ್ಟಿರುವ ದಿನಾಂಕ ಗೊತ್ತಿಲ್ಲ. ಹಾಗೂ ಅದರಲ್ಲಿ ಏನೇನು ಬರೆಯಲಾಗಿದೆ ಎಂದು ಗೊತ್ತಿಲ್ಲ. ವಿಚಾರಣಾಧಿಕಾರಿಯವರ ಮುಂದೆ ನನ್ನ ಹೇಳಿಕೆಯನ್ನು ಏನೇನು ಬರೆದುಕೊಂಡಿದ್ದಾರೆ ಎಂದು ನೆನಪಿಲ್ಲ. 1 ರಿಂದ 4 ನೇ ತರಗತಿಯ ವಿದ್ಯಾರ್ಥಿಗಳಿಂದ ತಲಾ 200 ರೂ, 5 ರಿಂದ 7 ತರಗತಿ ವಿದ್ಯಾರ್ಥಿಗಳಿಂದ ತಲಾ 300 ರೂ ಸಂಗ್ರಹಿಸಿರುವ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ಅಂತಹ ದಾಖಲೆ ಯಾವುದು ಎಂದರೆ ನೆನಪಿಲ್ಲ. ಆ ದಾಖಲೆಗಳನ್ನು ನಾನು ನೋಡಿದ್ದೇನೆ. ನಾನು ನೋಡಿದ ಪ್ರಕಾರ ದಾಖಲೆಗಳಲ್ಲಿ ಎಷ್ಟು ಹಣ ಸಂಗ್ರಹಿಸಿರುವ ಬಗ್ಗೆ ಬರೆಯಲಾಗಿದೆ ಎಂದರೆ ನೆನಪಿಲ್ಲ. ನನ್ನ ಕೈಗೆ ಹಣ ಕೊಡಿ ಎಂದು ದೊಡ್ಡಣ್ಣನವರು ಲಿಖಿತವಾಗಿ ನಮಗೆ ಕೇಳಿಲ್ಲ. ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ವಂತಿಕೆ ಹಣವನ್ನು ದೊಡ್ಡಣ್ಣನವರಿಗೆ ಕೊಡಬೇಕೆಂದು ನಿರ್ದೇಶನ ಕೊಟ್ಟಿರಲಿಲ್ಲ. ಶಾಲಾ ವಿದ್ಯಾರ್ಥಿಗಳಿಂದ ಯಾವುದೇ ವಂತಿಕೆ ಹಣವನ್ನು ಸಂಗ್ರಹಿಸಿರಲಿಲ್ಲ ಆದರೂ ಸಹ ದೊಡ್ಡಣ್ಣನವರಿಗೆ ಹಣ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕೊಟ್ಟಿರುವ ಹಣಕ್ಕೆ ರಶೀದಿ ಕೊಡಬೇಕೆಂದು ದೊಡ್ಡಣ್ಣವರನ್ನು ನಾವು ಕೇಳಿಲ್ಲ. ಆ ಬಗ್ಗೆ ರಶೀದಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ.

ಮಿಳಿಂದ ವಿದ್ಯಾಸಂಸ್ಥೆಯ ಹಣಕಾಸು ವ್ಯವಹಾರದ ಬಗ್ಗೆ ಆಡಿಟ್ ನಡೆದಿತ್ತು ಎಂದರೆ ಸರಿ. ಆಡಿಟ್ ವರದಿಯ ಪ್ರಕಾರ ದೊಡ್ಡಣ್ಣನವರು ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಎಲ್ಲೂ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶಾಲೆಯಿಂದ ಸಂಗ್ರಹಿಸಿದ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿತ್ತು ಎಂದರೆ ಸರಿಯಲ್ಲ ಅವರು ಬ್ಯಾಂಕ್ ಗೆ ಜಮೆ ಮಾಡಿಲ್ಲ. ನಾವು ನೇರವಾಗಿ ಹಣವನ್ನು ದೊಡ್ಡಣ್ಣನವರಿಗೆ ಕೊಡುತ್ತಿರಲಿಲ್ಲ ಶಾಲಾ ಗುಮಾಸ್ತರಿಗೆ ಕೊಡುತ್ತಿದ್ದೇವು. ವ್ಯಾನ್ ಖರೀದಿಸಲು ಸಂಗ್ರಹಿಸಿದ ಹಣವನ್ನು ಮಾತ್ರ ದೊಡ್ಡಣ್ಣನವರ ಕೈಗೆ ಕೊಟ್ಟಿದ್ದೇವೆ ಉಳಿದ ಯಾವುದೇ ಹಣವನ್ನು ಅವರ ಕೈಗೆ ಕೊಟ್ಟಿಲ್ಲ. ದೊಡ್ಡಣ್ಣನವರ ಮಾವ ಚೆನ್ನಯ್ಯ ರವರ ಸಪೋಟ ಮತ್ತು ಸೀಬೆ ಗಿಡದಿಂದ ಬಂದ ಹಣವನ್ನೆಲ್ಲ ತೆಗೆದುಕೊಂಡು ಹೋಗುತ್ತಿದ್ದರು ಮತ್ತು ಶಾಲಾ ಶಿಕ್ಷಕರೊಡನೆ ಅಸಭ್ಯವಾಗಿ ವರ್ತಿಸುತ್ತಿದ್ದರು ಎಂದು ಹೇಳಲು ದಾಖಲೆ ಇರುವುದಿಲ್ಲ. ಗೋವಿಂದಯ್ಯನವರ ಮಾತು ಕೇಳಿ ವ್ಯಾನ್ ಖರೀದಿಸಲು ಸಂಗ್ರಹಿಸಿದ ಹಣವನ್ನು ದೊಡ್ಡಣ್ಣನವರಿಗೆ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಾವ ಅಸಭ್ಯವಾಗಿ ವರ್ತಿಸುತ್ತದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡನವರು ಮೈಸೂರಿನ ಮಹಾರಾಣಿ ಕಾಲೇಜಿನ ಪ್ರೊಫೇಸರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಗೋವಿಂದಯ್ಯನವರು ಸಹ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೇಸರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದೊಡ್ಡಣ್ಣನವರನ್ನು ಹೇಗಾದರೂ ಮಾಡಿ  ಮಿಳಿಂದ ವಿದ್ಯಾಸಂಸ್ಥೆಯಿಂದ ಹೊರಹಾಕಬೇಕೆಂದು ನಮ್ಮ ಮೇಲೆ ಪ್ರಭಾವ ಬೀರಿ ಸುಳ್ಳು ಸಾಕ್ಷ್ಯ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೇ.ಕೇ.ಸರಿ. ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
***ಪಿರಿಯಾಪಟ್ಟಣ.***